# ಮೈಸೂರು ವಾರಿಯರ್ಸ್ ತಂಡಕ್ಕೆ ಆಯ್ಕೆ

ಮೈಸೂರು,ಆ.೨೩-ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡಕ್ಕೆ ಸ್ಥಳೀಯ ಕ್ರೀಡಾಪಟುಗಳಾದ ನಂದ ಕಿಶೋರ್ ಹಾಗೂ ಎನ್.ಶ್ರೇಯಸ್ ಆಯ್ಕೆಯಾಗಿದ್ದಾರೆ.

ಎನ್.ಆರ್.ಸಮೂಹ ಸ್ಥಳೀಯ ಕ್ರಿಕೆಟ್ ಪ್ರತಿಭೆಗಳಿಗೆ ಅವಕಾಶ ನೀಡುವ ಆಶಯದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಎಸ್‌ಡಿಎನ್‌ಆರ್ ಕ್ರಿಕೆಟ್ ಮೈದಾನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಕ್ರಿಕೆಟ್ ಪ್ರತಿಭಾನ್ವೇಷಣೆ ಆಯ್ಕೆ ಶಿಬಿರದಲ್ಲಿ ಇಬ್ಬರು ಆಯ್ಕೆಯಾಗಿದ್ದಾರೆ. ಅವರು ಈ ಬಾರಿಯ ಕೆಪಿಎಲ್ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.



**ನಂದ ಕಿಶೋರ್**



**ಎನ್.ಶ್ರೇಯಸ್**

ವಿಶೇಷವಾಗಿ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದವರಿಗೆ ಹಾಗೂ ಗ್ರಾಮೀಣ ಭಾಗದಲ್ಲಿರುವ ಕ್ರಿಕೆಟ್ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡಲು ಈ ಪ್ರತಿಭಾನ್ವೇಷಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಟ್ಯಾಲೆಂಟ್ ಹಂಟ್‌ನಲ್ಲಿ ಮಂಡ್ಯ, ರಾಮನಗರ, ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ೯೨ ಆಟಗಾರರು ಭಾಗವಹಿಸಿದ್ದರು. ಇವರಲ್ಲಿ ೪೦ ಮಂದಿ ಬೌಲರ್‌ಗಳು, ೧೪ ಮಂದಿ ಬ್ಯಾಟ್ಸ್‌ಮನ್‌ಗಳು, ೩೦ ಆಲ್ ರೌಂಡರ್‌ಗಳು ಮತ್ತು ೮ ವಿಕೆಟ್ ಕೀಪರ್‌ಗಳು ಸ್ಪರ್ಧಿಸಿದ್ದರು.

ಆಯ್ಕೆಯಾಗಿರುವ ಇಬ್ಬರು ಆಟಗಾರರಿಗೆ ಆ.೨೫ರಿಂದ ಸೆ.೫ರವರೆಗೆ ನಡೆಯಲಿರುವ ಮೈಸೂರು ವಾರಿಯರ್ಸ್‌ನ ಅಭ್ಯಾಸ ತಂಡದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.